ದಿನಾಂಕಃ 24.07.2023 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಐ ಎಸ್ ಟಿ ವಕೀಲರಿಂದಃ ಆರೋಪಿತರ ಪರವಾಗಿಃ

10. ನಿಮಗೆ ತರಬೇತಿಯನ್ನು ನೀಡುವ ಸಮಯದಲ್ಲಿ ಪಂಚನಾಮೆಯನ್ನು ಜರುಗಿಸುವ ಸ್ಥಳದ ಗೌರವಾನ್ವಿತ ವ್ಯಕ್ತಿಗಳನ್ನು ಪಂಚರನ್ನಾಗಿ ಕರೆಸಬೇಕು ಎಂದು ತಿಳಿಸಲಾಗಿದೆ ಎಂದರೆ ಸರಿ. ನಿಪಿ.2 ಪಂಚನಾಮೆಯನ್ನು ಜರುಗಿಸುವ ಸಮಯದಲ್ಲಿ ಸದರಿ ಪಂಚನಾಮೆಯನ್ನು ಜರುಗಿಸಿದ್ದೀರಿ ಎಂದು ಹೇಳಲಾದ ಸ್ಥಳದ ಗೌರವಾನ್ವಿತ ವ್ಯಕ್ತಿಗಳನ್ನು ನೀವು ಪಂಚರನ್ನಾಗಿ ಕರೆಸಿಲ್ಲ ಎಂದರೆ ಸರಿಯಲ್ಲ.

11. ಫ್ರಾಸಾ.6, ಫ್ರಾಸಾ.7, ಫ್ರಾಸಾ.8, ಫ್ರಾಸಾ.10, ಚಾಸಾ.11 ಮತ್ತು ಚಾಸಾ.13 ರವರ ಹೇಳಿಕೆಗಳನ್ನು ಪಡೆದುಕೊಳ್ಳಲು ನೀವು ಅವರಿಗೆ ನಿಮ್ಮ ಮುಂದೆ ಹಾಜರಾಗಿ ಹೇಳಿಕೆಗಳನ್ನು ನೀಡುವಂತೆ ನೋಟೀಸನ್ನು ಜಾರಿ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಪಿ.2 ಪಂಚನಾಮೆಯ ಚೆಕ್ಕು ಬಂದಿಯಲ್ಲಿ ಹೆಸರಿಸಿರುವ ವ್ಯಕ್ತಿಗಳನ್ನು ಕರೆಯಿಸಿ ಅವರ ಸಹಿಗಳನ್ನು ಪಂಚನಾಮೆಗೆ ಪಡೆಯಲು ತೊಂದರೆ ಇತ್ತೇ ಎಂದರೆ ಸಾಕ್ಷಿ ಸದರಿ ವ್ಯಕ್ತಿಗಳು ಆ ಸಮಯದಲ್ಲಿ ಕಂಡು ಬಂದಿಲ್ಲ ಎನ್ನುತ್ತಾರೆ.

12. ಫ್ರಾಸಾ.1 ರವರ ತಂದೆ ನಿಮ್ಮ ಇಲಾಖೆಯಲ್ಲಿ ಸುಧೀರ್ಘ ಸೇವೆಯನ್ನು ಸಲ್ಲಿಸಿ ನಿವೃತ್ತರಾಗಿರುತ್ತಾರೆ ಎಂದರೆ ಸರಿ. ನಿಪಿ.5 ಪಂಚನಾಮೆಯ ಕಾಲಕ್ಕೆ ವಶಪಡಿಸಿಕೊಂಡಿದ್ದೀರಿ ಎಂದು

ಹೇಳಲಾದ ಫೋಟೋಗಳನ್ನು ತೆಗೆದ ಮೂಲ ಸಾಧನ ಅಥವಾ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65 ಬಿ ರಡಿಯಲ್ಲಿ ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ನನ್ನ ತನಿಖಾ ಕಾಲದಲ್ಲಿ ಪಡೆದುಕೊಂಡಿಲ್ಲ ಎನ್ನುತ್ತಾರೆ. ನನ್ನ ತನಿಖಾ ಕಾಲದಲ್ಲಿ ಸದರಿ ಫೋಟೋಗಳನ್ನು ಎಲ್ಲಿ ಪ್ರಿಂಟ್ ಹಾಕಿಸಲಾಗಿತ್ತು ಎಂದು ವಿಚಾರಿಸಿಲ್ಲ.

13. ಗಾಯದ ಪ್ರಮಾಣ ಪತ್ರವನ್ನು ಸಲ್ಲಿಸುವಂತೆ ವೈದ್ಯಾಧಿಕಾರಿಗಳಿಗೆ ಮನವಿ ನೀಡಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ಮನವಿಯಲ್ಲಿ ಗಾಯದ ಬಗ್ಗೆ ಅಭಿಪ್ರಾಯವನ್ನು ನೀಡುವಂತೆ ಕೇಳಿದ್ದೀರಾ ಎಂದರೆ ಸಾಕ್ಷಿ ನಾನು ಕೇಳಿಲ್ಲ ಮುಂದಿನ ತನಿಖಾಧಿಕಾರಿಗಳು ಕೇಳಿದ್ದಾರೆ ಎನ್ನುತ್ತಾರೆ. ನೀವು ಹೇಳಿದಂತೆ ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನೀವು ಹೇಳಿದಂತೆ ಯಾವುದೇ ಸ್ಥಳಕ್ಕೆ ಭೇಟಿ ನೀಡಿಲ್ಲ ಮತ್ತು ಸ್ಥಳಕ್ಕೆ ಫ್ರಾಸಾ.2 ಮತ್ತು 9 ರವರಿಗೆ ನಿಪಿ.16 ರಂತೆ ನೋಟೀಸನ್ನು ಜಾರಿ ಮಾಡಿ ಬರಮಾಡಿಕೊಂಡಿಲ್ಲ ಮತ್ತು ಅವರ ಸಮಕ್ಷಮ ನಿಪಿ.2 ರಂತೆ ಪಂಚನಾಮೆಯನ್ನು ಜರುಗಿಸಿಲ್ಲ ಮತ್ತು ನಿಪಿ.3 ಮತ್ತು ನಿಪಿ.4 ರಂತೆ ಫೋಟೋಗಳನ್ನು ತೆಗೆಸಿಲ್ಲ ಎಂದರೆ ಸರಿಯಲ್ಲ. ಫ್ರಾಸಾ.1 ರವರ ತಂದೆ ನಿಮ್ಮ ಇಲಾಖೆಯವರಾಗಿರುವ ಕಾರಣ ನಿಪಿ.5 ಪಂಚನಾಮೆಯ ಕಾಲಕ್ಕೆ ಹಾಜರುಪಡಿಸಲಾಯಿತು ಎಂದು ಹೇಳಲಾದ ಫೋಟೋಗಳನ್ನೂ ಸಹ ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿ ನೀಡಿದ್ದೀರಿ ಎಂದರೆ ಸರಿಯಲ್ಲ. ನೀವು ಹೇಳಿದಂತೆ ನಿಪಿ.5 ರಂತೆ ಯಾವುದೇ

ಪಂಚನಾಮೆಯನ್ನು ಜರುಗಿಸಿಲ್ಲ ಮತ್ತು ನಿಪಿ.6 ರಿಂದನಿಪಿ.11 ರಂತೆ ಯಾವುದೇ ಫೋಟೋ ಮತ್ತು ದಾಖಲಾತಿಯನ್ನು ಅಮಾನತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೆಚ್